(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಟಿ.ಎಸ್. ಠಾಕೂರ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಎಸ್.ಜೆ. ಮುಖೋಪಾಧಾಯ

ಕ್ರಿಮಿನಲ್ ಮೇಲ್ಮನವಿ ಸಂ. 1853/2012,ದಿನಾಂಕ: 09 ನೇ ಜುಲೈ, 2013.

ತೀರ್ಪು

ನ್ಯಾಯಮೂರ್ತಿ ಎಸ್.ಜೆ. ಮುಖ್ಯೋಪಾಧಾಯ:

ಈ ಮೊಕದ್ದಮೆಯಲ್ಲಿನ ಮೇಲ್ಮನವಿದಾರರರನ್ನು ಭಿವಾನಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದಿಂದ ಭಾರತ ದಂಡ ಸಂಹಿತೆ, 1860 ರ (ಸಂಕ್ಷಿಪ್ತವಾಗಿ, " ಐ.ಪಿ.ಸಿ ") 498- ಎ ಮತ್ತು 304-ಬಿ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧದ ತಪ್ಪಿತಸ್ಥರೆಂದು ನಿರ್ಣಯಿಸಲಾಗಿತ್ತು.ಅವರನ್ನು ಐ.ಪಿ.ಸಿ. 304-ಬಿ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಜೀವಾವಧಿ ಶಿಕ್ಷೆಗೆ ಒಳಪಡಿಸಲಾಗಿತ್ತು ಹಾಗೂ ಮೂರು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಗೂ ಅವರನ್ನು ಒಳಪಡಿಸಿ, ಜೊತೆಗೆ ತಲಾ 5,000/- ರೂ.ಗಳ ದಂಡವನ್ನು ಸಂದಾಯ ಮಾಡುವಂತೆ ವಿಧಿಸಲಾಗಿತ್ತು ಮತ್ತು ಅದಕ್ಕೆ ತಪ್ಪಿದಲ್ಲಿ ಐ.ಪಿ.ಸಿ 498- ಎ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಆರು ತಿಂಗಳ ಅವಧಿಯ ಹೆಚ್ಚಿನ ಕಾರಾವಾಸ ಶಿಕ್ಷೆಗೆ ಗುರಿಪಡಿಸಲಾಗಿತ್ತು.ಸದರಿ ತೀರ್ಪು ಮತ್ತು ಅಪರಾಧ ನಿರ್ಣಯದ ವಿರುದ್ದ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅವರ ಮೇಲ್ಮನವಿಯನ್ನು ಚಂಡೀಘಡದಲ್ಲಿನ ಚ ಪಂಜಾಬ್ ಮತ್ತು ಹರಿಯಾಣಾ ಉಚ್ಚ ನ್ಯಾಯಾಲಯವು ವಜಾಗೊಳಿಸಿತು ಆದರೆ, ಐ.ಪಿ.ಸಿ. 304-ಬಿ ಅಡಿಯಲ್ಲಿನ ಅಪರಾಧಕ್ಕಾಗಿ ಕಾರಾವಾಸ ಶಿಕ್ಷೆಯನ್ನು ಜೀವಾವಧಿ ಕಾರಾವಾಸ ಶಿಕ್ಷೆಯಿಂದ 10 ವರ್ಷಗಳ ಕಾರಾವಾಸ ಶಿಕ್ಷೆಗೆ ಮಾರ್ಪಡಿಸಿತು.

2. ಪ್ರಾಸಿಕ್ಯೂಷನ್ ವಾದವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ದಿನಾಂಕ 14.4.2005 ರಂದು, ಹೇತಂಪುರ ಗ್ರಾಮದ ನಿವಾಸಿಯಾದ ಮನೋಜ್ ಕುಮಾರ್ (ಮೇಲ್ಮನವಿದಾರ 1) ಪತ್ನಿ ಮೀನಾದೇವಿ ಸುಟ್ಟಿರುವ ಪರಿಸ್ಥಿತಿಯಲ್ಲಿ ಆಸ್ಪತ್ರೆಗೆ ಸೇರಿದ್ದಾಳೆಂಬುದಕ್ಕೆ ಸಂಬಂಧಿಸಿದಂತೆ ಭಿವಾನಿಯ ಸಾರ್ವಜನಿಕ ಆಸ್ಪತ್ರೆಯ ಪ್ರಭಾರದಲ್ಲಿರುವ ಪೊಲೀಸ್ ಉಪಠಾಣೆಯಿಂದ ದೂರವಾಣಿ ಸಂದೇಶ ತಲುಪಿದ ಮೇಲೆ, ಭಿವಾನಿಯ ಸಾದರ್ ಪೊಲೀಸ್ ಠಾಣೆಯ ಎ.ಎಸ್.ಐ. ಛರ್ ಮಾಲ್ (ಪಿ.ಡಬ್ಲ್ಯೂ -11) ಇತರ ಪೊಲೀಸ್ ಅಧಿಕಾರಿಗಳೊಂದಿಗೆ ಸದರಿ ಆಸ್ಪತ್ರೆಗೆ ಧಾವಿಸಿ ಬಂದು, ಗಾಯಾಳು ಮೀನಾಳ ವೈದ್ಯಕಾನೂನು ವರದಿಯೊಂದಿಗೆ ವೈದ್ಯಕೀಯ ಟಿಪ್ಪಣಿಯನ್ನು ಪಡೆದುಕೊಂಡರು.ವರದಿ ಮಾಡುವುದಕ್ಕಾಗಿ ಗಾಯಾಳುವಿನ ದೈಹಿಕ ಸ್ಥಿತಿಗೆ ಸಂಬಂಧಿಸಿದಂತೆ ವೈದ್ಯರ ಅಭಿಪ್ರಾಯವನ್ನು ಪಡೆದುಕೊಂಡ ನಂತರ, ಆಸ್ಪತ್ರೆಯಲ್ಲಿ ಆಕೆಯ ಹೇಳಿಕೆಯನ್ನು ದಾಖಲಿಸಲು ಕರ್ತವ್ಯನಿರತ ಮ್ಯಾಜಿಸ್ಟ್ರೇಟರನ್ನು ಅವರು ಕರೆತಂದಾಗ, ವೈದ್ಯರು ಆಕೆಯನ್ನು ಆಗಲೇ ರೋಹಟಕ್ನ ಪಿ.ಜಿ.ಐ.ಎಂ.ಎಸ್.ಗೆ ಕಳುಹಿಸಿಬಿಟ್ಟಿದ್ದರು.ತದನಂತರ, ಅವರು ಮ್ಯಾಜಿಸ್ಟ್ರೇಟರೊಂದಿಗೆ ರೋಹಟಕ್ನ ಪಿ.ಜಿ.ಐ.ಎಂ.ಎಸ್.ಗೆ ತಲುಪಿ, ರೋಹಟಕ್ನ ಪಿ.ಜಿ.ಐ.ಎಂ.ಎಸ್ ಪ್ರಭಾರೀ ಪೊಲೀಸ್ ಉಪಠಾಣೆಯಿಂದ ಎರಡು ವೈದ್ಯಕೀಯ ಟಿಪ್ಪಣಿಗಳನ್ನು ಪಡೆದುಕೊಂಡರು.ಅವುಗಳಲ್ಲಿ ಒಂದು ಮೀನಾ ಸಾವಿಗೆ ಸಂಬಂಧಪಟ್ಟಿದ್ದಾಗಿತ್ತು.ನಂತರ ಅವರು ತುರ್ತು ಚಿಕಿತ್ಸಾ ಕೊಠಡಿಯ ಗ್ಯಾಲರಿಗೆ ತಲುಪಿ, ಅಲ್ಲಿ ಅವರನ್ನು

ಭೇಟಿಯಾದ ಫಿರ್ಯಾದುದಾರ ವೇದ್ಪಾಲ್ (ಪಿ.ಡಬ್ಲ್ಯೂ .9) ನ ಹೇಳಿಕೆಯನ್ನು ದಾಖಲಿಸಿಕೊಂಡರು.(ನಿಶಾನೆ-ಪಿಎ).

3. ಫಿರ್ಯಾದುದಾರ ವೇದ್ಪಾಲ್ನ (ಪಿ.ಡಬ್ಲ್ಯೂ .9) ಆಪಾದನೆಯು ಈ ಮುಂದಿನಂತಿದೆ:ತನಗೆ ಒಬ್ಬಳು ಮಗಳು ಹಾಗೂ ಇಬ್ಬರು ಗಂಡು ಮಕ್ಕಳಿದ್ದರು.

3.1 ತನ್ನ ಮಗಳನ್ನು ಘಟನೆ ನಡೆದ ದಿನಾಂಕ 14.4.2005 ಕ್ಕೆ ಮುಂಚಿನ ಸುಮಾರು ಐದು ವರ್ಷಗಳ ಹಿಂದೆ ಮಹಾಬೀರ್ ಎಂಬುವವರ ಮಗ ಮನೋಜ್ (ಮೇಲ್ಮನವಿದಾರ -1) ನೊಂದಿಗೆ ವಿವಾಹ ಮಾಡಿಕೊಡಲಾಗಿತ್ತು (ವಾಸ್ತವಿಕ ವಿವಾಹ ದಿನಾಂಕ DD_1_DD ಎಂದು ಕಂಡುಬಂದಿದೆ).ತನ್ನ ಮಗಳ ವಿವಾಹದಲ್ಲಿ ತಾನು ತನ್ನ ಹಣಕಾಸಿನ ಸಾಮರ್ಥ್ಯವನ್ನು ಮೀರಿ ವರದಕ್ಷಿಣೆಯನ್ನು ನೀಡಿದ್ದೆ.ಆದರೆ, ತನ್ನ ಮಗಳು ಗಂಡನ ಮನೆಯಿಂದ ಮೊದಲ ಸಲ ಬಂದಾಗಲೇ ತಾನು ಮದುವೆಯಲ್ಲಿ ಕೊಟ್ಟ ವರದಕ್ಷಿಣೆಯ ಒಡವೆ-ವಸ್ತುಗಳು ಆಕೆಯ ಗಂಡನ ಮನೆ ಕಡೆಯವರಿಗೆ ತೃಪ್ತಿ ತಂದಿಲ್ಲವೆಂದು ಹೇಳಿದ್ದಳು ಎಂದು ಆತನು ಹೇಳಿದ್ದಾನೆ.ಫಿರ್ಯಾದುದಾರರು ಡಬಲ್ ಬೆಡ್, ಟಿ.ವಿ., ಫ್ರಿಡ್ಜ್, ಕೂಲರ್, ಸೋಫಾ ಸೆಟ್, ಅಲ್ಮೇರಾ, 21 ಬಗೆಯ ಪಾತ್ರೆ ಸಾಮಾನುಗಳು, ಬಟ್ಟೆಗಳು ಮುಂತಾದವುಗಳ ಜೊತೆಗೆ 2100/- ರೂ.ಗಳ ನಗದನ್ನು ಕೊಟ್ಟಿದ್ದರು.

3.2 ಫಿರ್ಯಾದುದಾರರ (ಪಿ.ಡಬ್ಲ್ಯೂ .9) ಮಗಳು ಎರಡನೆಯ ಬಾರಿಗೆ ಗಂಡನ ಮನೆಗೆ ಹೋದಾಗ, ಅವರ ಅಳಿಯ ಮನೋಜ್ (ಮೇಲ್ಮನವಿದಾರ -1); ಅವರ ಮಗಳ ಅತ್ತೆ ಚಮೇಲಿ ದೇವಿ (ಮೇಲ್ಮನವಿದಾರಳು -2); ಮಾವ ಮಹಾಬೀರ್ (ಖುಲಾಸೆಯಾಗಿದ್ದಾರೆ) ಮತ್ತು ಅವರ ಮಗಳ ವಾರಗಿತ್ತಿ (ಗಂಡನ ಅಣ್ಣನ ಹೆಂಡತಿ) ಸುಮನ್ (ಮೇಲ್ಮನವಿದಾರಳು -3) ಮೋಟಾರ್ ಸೈಕಲ್ಗೆ ಬೇಡಿಕೆಯನ್ನು ಸಲ್ಲಿಸಿದರು ಹಾಗೂ ಅದಕ್ಕಾಗಿ ಅವಳನ್ನು ಹಿಂಸಿಸಲು (ಹೊಡೆಯಲು) ಪ್ರಾರಂಭಿಸಿದರು.

3.3 ಆದ್ದರಿಂದ, ಮೀನಾದೇವಿ (ಮೃತಳು) ತಂದೆಯೊಂದಿಗೆ (ಫಿರ್ಯಾದುದಾರ) ವಾಸಿಸಲು ಪ್ರಾರಂಭಿಸಿದಳು.ಅವಳು ತನ್ನ ತಂದೆಯೊಂದಿಗೆ (ಫಿರ್ಯಾದುದಾರ) ಹದಿನಾರು ತಿಂಗಳುಗಳ ಕಾಲ ಜೊತೆಗಿದ್ದಳು.ದಿನಾಂಕ 14.4.2005 ರಂದು ಈ ಘಟನೆ ನಡೆದ ಸುಮಾರು ಹತ್ತು ತಿಂಗಳುಗಳ ಹಿಂದೆ ಫಿರ್ಯಾದುದಾರನು (ಪಿ.ಡಬ್ಲ್ಯೂ .9) ಮಗಳಿಗೆ ತಿಳಿವಳಿಕೆ ಹೇಳಿ ಹೇತಂಪುರ ಪಂಚಾಯತಿಯ ಮತ್ತು ಹಿಸ್ಸಾರ್ ನಿವಾಸಿಯಾದ ಸಂತ್ಸಿಂಗ್ ಬಿನ್ ಚಂದುರಾಮ್ ಸಮ್ಮುಖದಲ್ಲಿ ಆಕೆಯನ್ನು ವಾಪಸ್ ಗಂಡನ ಮನೆಗೆ ಕಳುಹಿಸಿಕೊಟ್ಟನು.ಆನಂತರವೂ ಕೂಡ ಆಪಾದಿತರು ಮೋಟಾರ್ ಸೈಕಲ್ಗೆ ಬೇಡಿಕೆ ಸಲ್ಲಿಸುತ್ತಲೇ ಇದ್ದು, ಅವರ ಮಗಳಿಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು.

3.4 ದಿನಾಂಕ 14.4.2005 ರಂದು ಸುಮಾರು ಬೆಳಗ್ಗೆ 8 ಗಂಟೆಗೆ, ಆಕೆಯ ಮಾವ ಮಹಾವೀರ್ ಭಿವಾನಿ ಆಸ್ಪತ್ರೆಯಿಂದ ಆತನಿಗೆ ದೂರವಾಣಿ ಕರೆ ಮಾಡಿ, ಮೀನಾದೇವಿಗೆ ಸುಟ್ಟ ಗಾಯಗಳಾಗಿರುವುದರಿಂದ ಭಿವಾನಿ ಆಸ್ಪತ್ರೆಗೆ ಸೇರಿಸಲಾಗಿದೆಯೆಂದು ತಿಳಿಸಿದರು.ಈ ಮಾಹಿತಿ ತಿಳಿದ ಮೇಲೆ ಫಿರ್ಯಾದುದಾರ (ಪಿ.ಡಬ್ಲ್ಯೂ .9) ಮತ್ತು ದಯಾನಂದ್ ಬಿನ್ ಜೋಗಿರಾಮ್ ಮತ್ತು ಆತನ ಸಹೋದರ ಶಾಮ್ ಶೇರ್ ಭಿವಾನಿಯ ಆಸ್ಪತ್ರೆ ತಲುಪಿದರು.ಅಲ್ಲಿ ಅವರಿಗೆ ಮೀನಾದೇವಿಯನ್ನು (ಮೃತಳು) ರೋಹಟಕ್ನ ಪಿ.ಜಿ.ಐ.ಎಂ.ಎಸ್.ಗೆ ಕಳುಹಿಸಲಾಗಿದೆಯೆಂದು ತಿಳಿದುಬಂದಿತು.

3.5 ಆನಂತರ, ಅವರೆಲ್ಲರೂ ರೋಹಟಕ್ನ ಪಿ.ಜಿ.ಐ.ಎಂ.ಎಸ್.ಗೆ ಹೋಗಿ, ಅಲ್ಲಿನ ತುರ್ತು ಚಿಕಿತ್ಸಾಲಯದಲ್ಲಿ ಆತನ ಮಗಳನ್ನು ಭೇಟಿಯಾದರು.ಆತನ ಮಗಳು ಆತನಿಗೆ ಹೇಳಿದ್ದೇನೆಂದರೆ, ಆ ದಿನ ಬೆಳಗ್ಗೆ ತನ್ನ ಅತ್ತೆ ಚಮೇಲಿದೇವಿ (ಮೇಲ್ಮನವಿದಾರಳು -2) ತನ್ನನ್ನು ರೂಮಿಗೆ ಕರೆದಳು, ಅಲ್ಲಿ ತನ್ನ ಗಂಡ ಮನೋಜ್ (ಮೇಲ್ಮನವಿದಾರ -1) ತನ್ನ ಮೇಲೆ ಸೀಮೆಎಣ್ಣೆ ಸುರಿದನು, ತನ್ನ ಗಂಡನ ಅಣ್ಣನ ಹೆಂಡತಿ (ವಾರಗಿತ್ತಿ) ಸುಮನ್ (ಮೇಲ್ಮನವಿದಾರಳು -3) ಬೆಂಕಿಕಡ್ಡಿಯನ್ನು ಗೀರಿ ತನ್ನ ಮೇಲೆ ಬೆಂಕಿ ಹಚ್ಚಿದಳು, ಆ ಕಾರಣದಿಂದಾಗಿ ತಾನು ಬೆಂದುಹೋದೆನೆಂದು ಆಕೆ ತಿಳಿಸಿದಳೆಂದು ಆತನು ಹೇಳಿದ್ದಾನೆ.

3.6 ಆ ಮೇಲೆ ಸ್ವಲ್ಪ ಸಮಯದ ನಂತರ ಮೀನಾದೇವಿ (ಮೃತಳು) ಚಿಕಿತ್ಸೆ ನಡೆಯುತ್ತಿರುವಾಗಲೇ ಕೊನೆಯುಸಿರೆಳೆದಳು.ತನ್ನ ಮಗಳು ಮೀನಾದೇವಿಯನ್ನು (ಮೃತಳು) ವರದಕ್ಷಿಣೆ ದುರಾಸೆಯಿಂದ ಆಕೆಯ ಗಂಡ ಮನೋಜ್ (ಮೇಲ್ಮನವಿದಾರ -1) ಅತ್ತೆ ಚಮೇಲಿದೇವಿ (ಮೇಲ್ಮನವಿದಾರಳು 2) ಮತ್ತು ವಾರಗಿತ್ತಿ ಸುಮನ್ (ಮೇಲ್ಮನವಿದಾರಳು -3) ಪರಸ್ಪರ ಸಂಚು ನಡೆಸಿ, ರೂಮಿಗೆ ಕರೆದು ಆಕೆಯ ಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿದ್ದಾರೆಂದು ಆಪಾದಿಸಿ, ಆಪಾದಿತರ ಮೇಲೆ ಕ್ರಮಕೈಗೊಳ್ಳಬೇಕೆಂದು ಪ್ರಾರ್ಥಿಸಿದ್ದಾನೆ.

4. ಅಂಥ ದೂರಿನ ಆಧಾರದ ಮೇಲೆ, ಐ.ಪಿ.ಸಿ. ಸೆಕ್ಷನ್ಸ್ 304-ಬಿ/478- ಎ/406/34 ರ ಅಡಿಯಲ್ಲಿ ಪ್ರಥಮ ಮಾಹಿತಿ ವರದಿ (ಎಫ್.$$_0_$$ಆರ್) ಸಂ. 103, ದಿನಾಂಕ 14.4.2005 ನ್ನು ದಾಖಲು ಮಾಡಲಾಯಿತು.ಮೇಲ್ಕಂಡ ಆಪಾದನೆಗಳ ಆಧಾರದಲ್ಲಿ ಎಲ್ಲಾ ನಾಲ್ಕು ಆಪಾದಿತರ ಮೇಲೆ 304-ಬಿ ಪ್ರಕರಣದ ಅಡಿಯಲ್ಲಿ, ಪರ್ಯಾಯವಾಗಿ ತಾವು ತಪ್ಪು ಮಾಡಿಲ್ಲವೆಂದು ವಾದಿಸಿ ಅಧಿವಿಚಾರಣೆಗೆ ಕ್ಲೇಮು ಮಾಡುವ ಐ.ಪಿ.ಸಿ. 34 ನೇ ಪ್ರಕರಣದೊಂದಿಗೆ ಓದಿಕೊಂಡಂತೆ, 302, 498- ಎ, ಮತ್ತು 406 ನೇ ಪ್ರಕರಣಗಳ ಅಡಿಯಲ್ಲಿ ಆರೋಪಗಳನ್ನು ಹೊರಿಸಲಾಯಿತು.

5. ಪ್ರಾಸಿಕ್ಯೂಷನ್ ತಮ್ಮ ವಾದಕ್ಕೆ ಬೆಂಬಲವಾಗಿ ಒಟ್ಟಿಗೆ ಹನ್ನೊಂದು ಸಾಕ್ಷಿಗಳನ್ನು ಹಾಜರುಪಡಿಸಿತು.ಪ್ರಾಸಿಕ್ಯೂಷನ್ ಸಾಕ್ಷಿಗಳ ಮುಖಾಂತರ ನಿಶಾನೆಗಳನ್ನು ರುಜುವಾತುಪಡಿಸಲಾಯಿತು.ಎದುರುದಾರರೂ ಕೂಡ ತಮ್ಮ ಪರವಾಗಿ ಎರಡು ಸಾಕ್ಷಿಗಳನ್ನು ಹಾಜರುಪಡಿಸಿದರು.

6. ಭಿವಾನಿಯ ಸೆಷನ್ಸ್ ನ್ಯಾಯಾಲಯವು ದಿನಾಂಕ 4.9.2006 ರ ತೀರ್ಪಿನ ಮೂಲಕ ಮೃತಳ ಮಾವ ಮಹಾಬೀರ್‌ನ್ನು ಖುಲಾಸೆಗೊಳಿಸಿತು ಮತ್ತು ಮೇಲ್ಮನವಿದಾರರು ಐ.ಪಿ.ಸಿ. ಸೆಕ್ಷನ್ 498- ಎ ಹಾಗೂ 304-ಬಿ ಅಡಿಯಲ್ಲಿ ಅ ಅಪರಾಧದ ತಪ್ಪಿತಸ್ಥರೆಂದು ನಿರ್ಣಯಿಸಿತು.ಮುಂದುವರಿದು, ಐ.ಪಿ.ಸಿ. ಸೆಕ್ಷನ್ 34 ರೊಂದಿಗೆ ಓದಿಕೊಂಡಂತೆ 302 ಮತ್ತು 306 ನೇ ಸೆಕ್ಷನ್ನಳ ಅಡಿಯಲ್ಲಿನ ಅಪರಾಧಗಳಿಗಾಗಿ ಎಲ್ಲಾ ಆಪಾದಿತರ ವಿರುದ್ಧದ ವಾದವನ್ನು ಪ್ರಾಸಿಕ್ಯೂಷನ್ ರುಜುವಾತುಪಡಿಸಲು ತೀವ್ರವಾಗಿ ವಿಫಲವಾಗಿದೆಯೆಂದು ನಿರ್ಣಯಿಸಿತು.ಆ ಕಾರಣದಿಂದ ಸದರಿ ಅಪರಾಧಕ್ಕೆ ಸಂಬಂಧಿಸಿದಂತೆ ಎಲ್ಲಾ ನಾಲ್ಕು ಆಪಾದಿತರು ಖುಲಾಸೆಗೊಂಡರು.

7. ಭಿವಾನಿಯ ಸೆಷನ್ಸ್ ನ್ಯಾಯಾಲಯವು ಹೊರಡಿಸಿದ ಆದೇಶದ ವಿರುದ್ಧ ಎದುರುದಾರರು ಮೇಲ್ಮನವಿಯನ್ನು ಸಲ್ಲಿಸಿದರು ಮತ್ತು ಮಹಾವೀರ್ ಖುಲಾಸೆಯ ವಿರುದ್ಧ ಮತ್ತೊಂದು ಮೇಲ್ಮನವಿಯನ್ನು ಫಿರ್ಯಾದುದಾರ ವೇದ್ಪಾಲ್ (ಪಿ.ಡಬ್ಲ್ಯೂ .9) ಸಲ್ಲಿಸಿದರು.ಚಂಡೀಘಡದ ಪಂಜಾಬ್ ಮತ್ತು ಹರಿಯಾಣಾ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, ದಿನಾಂಕ 15.2.2012 ರ ಪ್ರಶ್ನಿತ ಚ ತೀರ್ಪಿನ ಮೂಲಕ ವೇಲ್,

ಫಿರ್ಯಾದುದಾರ (ಪಿ.ಡಬ್ಲ್ಯೂ .9) ಸಲ್ಲಿಸಿದ್ದ ಮೇಲ್ಮನವಿಯನ್ನು ವಜಾಗೊಳಿಸಿತು.ಸೆಷನ್ಸ್ ನ್ಯಾಯಾಲಯವು ಹೊರಡಿಸಿದ ತೀರ್ಪನ್ನು, ಕಾರಾಗೃಹ ಶಿಕ್ಷೆಯಲ್ಲಿನ ಮಾರ್ಪಾಡುಗಳೊಂದಿಗೆ ಎತ್ತಿಹಿಡಿದು, ಮೇಲ್ಮನವಿದಾರರು ಸಲ್ಲಿಸಿದ ಮೇಲ್ಮನವಿಯನ್ನು ಕೂಡಾ ವಜಾಗೊಳಿಸಿತು.

8. ಈ ಮೇಲ್ಮನವಿಯಲ್ಲಿ, ಮೇಲ್ಮನವಿದಾರರ ಪರ ಹಾಜರಾದ ಮಾನ್ಯ ವಕೀಲರು ವಾದಿಸಿ, ಮೃತಳ ಸುಟ್ಟ ಗಾಯಗಳ ಗಂಭೀರತೆಯ ದೃಷ್ಟಿಯಿಂದ ಆಕೆ ಮರಣ ಹೇಳಿಕೆಯನ್ನು ಸಲ್ಲಿಸುವ ಮನಸ್ಥಿತಿಯಲ್ಲಿರಲು ಸಾಧ್ಯವಿರುವುದಿಲ್ಲ.ಸದರಿ ಮರಣ ಹೇಳಿಕೆಯನ್ನು ಡಾ.ರಾಜೇಂದರ್ ರಾಯ್ (ಪಿ.ಡಬ್ಲ್ಯೂ -4) ಸಮ್ಮುಖದಲ್ಲಿ ಮಾಡಲಾಗಿದೆಯೆಂದು ತಾತ್ಪರ್ಯವಾಗುತ್ತದೆ. ಆದರೆ ಅದನ್ನು ಪುಷ್ಟೀಕರಿಸುವ ಯಾವುದೇ ಇತರ ಸಾಕ್ಷ್ಯವು ಇಲ್ಲದಿರುವಲ್ಲಿ ಮರಣ ಹೇಳಿಕೆಯನ್ನು ಆಧಾರವಾಗಿಟ್ಟುಕೊಳ್ಳಬಾರದು ಎಂದು ವಾದಿಸಿದ್ದಾರೆ.

9. ದಂಡಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ವರದಿಯನ್ನು ಸಿದ್ಧಪಡಿಸಿದ ಪಿ.ಡಬ್ಲ್ಯೂ.ಪೊಲೀಸ್ ಇನ್ಸ್ಪೆಕ್ಟರ್, ತನ್ನ ಹೇಳಿಕೆಯಲ್ಲಿ, ಆಕೆಯ ವೈದ್ಯ ಕಾನೂನು ವರದಿಯ (ಎಂ.ಎಲ್.ಆರ್) ಸಂದರ್ಭದಲ್ಲಿ ವೈದ್ಯರು ದಾಖಲಿಸಿದರೆಂದು ಹೇಳಲಾದ ಮೃತಳ ಹೇಳಿಕೆಯ ಉಲ್ಲೇಖವಿರಲಿಲ್ಲವೆಂದು ಒಪ್ಪಿಕೊಂಡಿದ್ದಾರೆ.ಅಲ್ಲದೆ ದಂಡಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿಯೂ ಕೂಡ, ಸದರಿ ಪ್ರಶ್ನಿತ ಎಂ.ಎಲ್.ಆರ್.ಗೆ ಆತನು ಸಹಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಆಪಾದಿತನನ್ನು ಪ್ರಶ್ನಿಸಿಯೇ ಇಲ್ಲ. ಸದರಿ ಮರಣ ಹೇಳಿಕೆಯು ಗುಮಾನಿ ಮತ್ತು ಸಂದೇಹವನ್ನು ಹುಟ್ಟಿಸುತ್ತದೆ.ಮರಣ ಹೇಳಿಕೆಯನ್ನು ಮ್ಯಾಜಿಸ್ಟ್ರೇಟರೇ ದಾಖಲಿಸಿಕೊಳ್ಳಬೇಕು ಎಂಬ ಪಕ್ಕಾ ಆದ ಕಾನೂನು ಪ್ರಸ್ತಾವನೆಯೇನೂ ಇಲ್ಲದಿರಬಹುದು, ಆದರೆ ಎತ್ತಿಕೊಂಡ ಪ್ರಕರಣವೊಂದರಲ್ಲಿ ಸಾಕಷ್ಟು ಸಮಯ ಮತ್ತು ಅವಕಾಶವಿದ್ದರೆ, ಸದರಿ ಮರಣ ಹೇಳಿಕೆಯನ್ನು ವಿಶ್ವಾಸಾರ್ಹವಾಗಿಸುವ ಸಲುವಾಗಿ ಮ್ಯಾಜಿಸ್ಟ್ರೇಟರ ಸೇವೆಗಳನ್ನು ಆಹ್ವಾನಿಸಬೇಕಾಗುತ್ತದೆ.ತನಿಖಾಧಿಕಾರಿಯು (ಐ.$$_0_$$-ಪಿ.ಡಬ್ಲ್ಯೂ .11), ನಿಶಾನೆ-ಪಿ.ಎಫ್ ಹೇಳಿಕೆಯನ್ನು ಓದಿದ ನಂತರ, ಆಕೆ ಅಂತಹ ಹೇಳಿಕೆಯನ್ನು ಸಲ್ಲಿಸಿದ್ದಳೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಲು ತಾನು ಮೃತಳಿದ್ದಲ್ಲಿಗೆ ಹೋಗಲಿಲ್ಲವೆಂದು ಹೇಳಿದ್ದಾರೆ ಎಂದು ವಾದವನ್ನು ಮಂಡಿಸಲಾಗಿದೆ.

10. ತದ್ವಿರುದ್ಧವಾಗಿ, ಪ್ರಾಸಿಕ್ಯೂಷನ್ ಪರ ನ್ಯಾಯವಾದಿಯ ಪ್ರಕಾರ, ವೈದ್ಯಾಧಿಕಾರಿ ಡಾ:ರಾಜೇಂದ್ರ ರಾಯ್ (ಪಿ.ಡಬ್ಲ್ಯೂ.- 4) ದಾಖಲಿಸಿದ ಮರಣ ಹೇಳಿಕೆಯು ವಿಶ್ವಾಸಾರ್ಹವಾದುದಾಗಿದೆ.ಡಾ:ರಾಜೇಂದ್ರ ರಾಯ್ (ಪಿ.ಡಬ್ಲ್ಯೂ -4) ಅವಿಶ್ವಾಸಾರ್ಹವಾದ ಸಾಕ್ಷಿ ಎಂದು ಸೂಚಿಸುವುದಕ್ಕೆ ದಾಖಲೆಯಲ್ಲೇನೂ ಇಲ್ಲ. ಪತಿಯಾಗಿ ಆತನು ಸಹಜ ಸಾಕ್ಷಿಯಾಗಿದ್ದಾನೆ ಹಾಗೂ ದೀರ್ಘವಾದ ಪಾಟೀಸವಾಲಿನ ಅವಧಿಯಲ್ಲಿ ಆತನ ಸಾಕ್ಷ್ಯವು ವಿಚಲಿತವಾಗಲಿಲ್ಲ.ವೈದ್ಯರು ಮರಣ ಹೇಳಿಕೆಯನ್ನು ದಾಖಲಿಸಿಕೊಳ್ಳುವಾಗ ಮೃತಳೊಂದಿಗೆ ಆಪಾದಿತ ವ್ಯಕ್ತಿಗಳು ಮಾತ್ರ ಹಾಜರಿದ್ದರೇ ಹೊರತು ಮೃತಳ ಕುಟುಂಬ ಸದಸ್ಯರಾರೂ ಇಲ್ಲದಿದ್ದುದರಿಂದ, ಸಾಕ್ಷ್ಯ ತಯಾರಿಸುವ ಸಿದ್ಧಾಂತವನ್ನೂ ಕೂಡ ತಳ್ಳಿಹಾಕಲಾಗಿದೆ.ಪಿ.ಡಬ್ಲ್ಯೂ.- 4 ರ ಸಾಕ್ಷ್ಯವು ವಿಶ್ವಾಸಯೋಗ್ಯ, ಸಮಂಜಸ ಹಾಗೂ ನಂಬಲರ್ಹ ಸಾಕ್ಷಿಯಾಗಿದೆ ಎಂಬುದು ಪ್ರಾಸಿಕ್ಯೂಷನ್ ವಾದವಾಗಿದೆ.

11. ಮುಂದುವರಿದು, ಪ್ರಾಸಿಕ್ಯೂಷನ್ ಪರ ಮಾನ್ಯ ನ್ಯಾಯವಾದಿಯು ವಾದಿಸುತ್ತಾ, ಕೆಳಗಿನ ಎರಡೂ ನ್ಯಾಯಾಲಯಗಳು ಮೃತಳ ಮರಣ ಹೇಳಿಕೆಯನ್ನು ನಂಬಿರುವ ಹಿನ್ನೆಲೆಯಲ್ಲಿ, 304-ಬಿ ಪ್ರಕರಣಕ್ಕೆ ಹೆಚ್ಚುವರಿಯಾಗಿ 302 ನೇ ಪ್ರಕರಣದ ಅಡಿಯಲ್ಲಿ ಪರ್ಯಾಯ ಆರೋಪವನ್ನು ರೂಪಿಸಬೇಕೆಂದು ವಾದಿಸಿದ್ದಾರೆ.302 ನೇ ಪ್ರಕರಣದ ಅಡಿಯಲ್ಲಿ ಆಪಾದಿತ ವ್ಯಕ್ತಿಗಳನ್ನು ಅಪರಾಧ ನಿರ್ಣೀತರಾಗಿಸದಿರುವ

ಮೂಲಕ ಅಧಿವಿಚಾರಣಾ ನ್ಯಾಯಾಲಯ ಅಂತೆಯೇ ಉಚ್ಚ ನ್ಯಾಯಾಲಯವು ಮಹತ್ವದ ಲೋಪವನ್ನೆಸಗಿವೆ.ಅಪರಾಧ ನಿರ್ಣಯವನ್ನು ಐ.ಪಿ.ಸಿ. 304-ಬಿ ಪ್ರಕರಣದಿಂದ 302 ನೇ ಪ್ರಕರಣಕ್ಕೆ ಪರಿವರ್ತಿಸುವ ಬಗ್ಗೆ ಈ ನ್ಯಾಯಾಲಯವು ಭಾರತ ಸಂವಿಧಾನದ 142 ನೇ ಅನುಚ್ಛೇದದ ಅಡಿಯಲ್ಲಿ ವಿಶೇಷ ಅಧಿಕಾರಗಳನ್ನು ಚಲಾಯಿಸಬಹುದಾದ ಒಂದು ಸೂಕ್ತ ಮೊಕದ್ದಮೆ ಇದಾಗಿದೆಯೆಂದು ಅವರು ವಾದಿಸಿದ್ದಾರೆ.

12. ವೈದ್ಯ-ಕಾನೂನು ಪರೀಕ್ಷೆಯನ್ನು ನಡೆಸಿ, ಮೃತಳ ಹೇಳಿಕೆಯನ್ನು ದಾಖಲಿಸಿದ ಡಾ:ರಾಜೇಂದರ್ ರಾಯ್ (ಪಿ.ಡಬ್ಲ್ಯೂ -4) ಅವರ ಸಾಕ್ಷ್ಯಕ್ಕೆ ಬಂದಾಗ, ನಿರ್ದಿಷ್ಟವಾಗಿ ಅವರು ನುಡಿದ ಸಾಕ್ಷ್ಯವೇನೆಂದರೆ, ಮೃತ ಮೀನಾಳನ್ನು ಸುಟ್ಟಿರುವ ಸ್ಥಿತಿಯಲ್ಲಿ ಆಸ್ಪತ್ರೆಗೆ ತರಲಾಯಿತು.ಸೀಮೆಎಣ್ಣೆ ತರಹದ ವಾಸನೆ ಇತ್ತು. ಬಟ್ಟೆಯಲ್ಲಿಯೂ ಕೂಡ ಆ ವಾಸನೆ ಇತ್ತು. ಪರೀಕ್ಷಿಸುವಾಗ ಆಕೆಗೆ ಪ್ರಜ್ಞೆಯಿತ್ತು.12 ಗಂಟೆ ಅವಧಿಯೊಳಗೆ ತೀವ್ರವಾಗಿ ಶೇ .100 ರಷ್ಟು ಸುಟ್ಟಿರುವುದು ಮೇಲ್ನೋಟಕ್ಕೆ ಕಾಣುತ್ತಿತ್ತು ಎಂದು ಹೇಳಿದ್ದಾರೆ.ಮೃತಳು ತನಗೆ ಹೇಳಿದ್ದೇನೆಂದರೆ, ಆಕೆಯನ್ನು ಒಳಗೆ ಕರೆದು, ಒಳಗಿನಿಂದ ಬಾಗಿಲಿಗೆ ಚಿಲುಕ ಹಾಕಲಾಯಿತು.ಆಕೆಯ ಮೇಲೆ ಸೀಮೆಎಣ್ಣೆಯನ್ನು ಚೆಲ್ಲಲಾಯಿತು.ಮತ್ತು ಆಕೆಯ ವಾರಗಿತ್ತಿ ಸುಮನ್ ಬೆಂಕಿಕಡ್ಡಿಯಿಂದ ಬೆಂಕಿ ಹಚ್ಚಿದಳು.ಆಕೆಯ ಗಂಡ ಮತ್ತು ಅತ್ತೆ ಕೂಡ ಅದರಲ್ಲಿ ಭಾಗಿಯಾಗಿದ್ದರು ಎಂದು ಹೇಳಿದ್ದಳೆಂದು ಡಾ:ರಾಜೇಂದರ್ ರಾಯ್ (ಪಿ.ಡಬ್ಲ್ಯೂ -4) ಹೇಳಿದ್ದಾರೆ.ಮೃತಳ ಹೇಳಿಕೆಯನ್ನು ದಾಖಲಿಸಿದ ನಂತರ ತಾನು ಅದಕ್ಕೆ ಸಹಿ ಮಾಡಿದೆ.ಆ ಹೇಳಿಕೆಯನ್ನು ಮತ್ತೊಮ್ಮೆ ತಾನು ಹಿಂದಿ ಭಾಷೆಯಲ್ಲಿ ರೋಗಿಗೆ ಓದಿ ಹೇಳಿದೆ.ಆಕೆ ಸರಿ ಎಂದಳು.ತಾನು ಮತ್ತೊಮ್ಮೆ ರೋಗಿಯನ್ನು ಮೇಲಿನ ಹೇಳಿಕೆ ಸರಿಯಾಗಿದೆಯೇ ಎಂದು ಕೇಳಿದೆ, ಆಕೆ ಮತ್ತೊಮ್ಮೆ ಹೌದು ಎಂದಳು.ತಾನು ಹಿಂಬರಹಕ್ಕೆ ಮತ್ತೊಮ್ಮೆ ಸಹಿ ಮಾಡಿ ಬೆಳಗ್ಗೆ 7.55 ರ ಸಮಯವನ್ನು ದಾಖಲಿಸಿದೆ.ತನ್ನ ಕೈಬರಹದಲ್ಲಿ ತಾನು ದಾಖಲಿಸಿದ ರೋಗಿಯ ಹೇಳಿಕೆ ಮತ್ತು ತನ್ನ ಹಿಂಬರಹವೂ ಒಳಗೊಂಡಂತೆ ತಾನು ಎಂ.ಎಲ್.ಆರ್. ಅನ್ನು ಸಿದ್ಧಪಡಿಸಿದೆ ಎಂದು ಅವರು ಹೇಳಿದ್ದಾರೆ.ಮುಂದುವರಿದು ಅವರು ಹೇಳಿಕೆ ಸಲ್ಲಿಸುತ್ತಾ, ತಾನು ಬೆಳಗ್ಗೆ 8.00 ಗಂಟೆಗೆ ಭಿವಾನಿಯ ಸಾರ್ವಜನಿಕ ಆಸ್ಪತ್ರೆಯ ಪ್ರಭಾರೀ ಪೊಲೀಸ್ ಪೋಸ್ಟ್ಗೆ ರುಕಾವನ್ನು (ಟಿಪ್ಪಣಿ, ನಿಶಾನೆ ಪಿಜಿ) ಕಳುಹಿಸಿದೆ.ಹಾಗಾಗಿ, ಭಿವಾನಿಯ ಸಾದರ್ ಪೊಲೀಸ್ ಠಾಣೆಯ ಎ.ಎಸ್.ಐ. ಛತ್ತರ್ಮಲ್, ಮೀನಾದೇವಿಯು ಹೇಳಿಕೆ ನೀಡುವ ಸ್ಥಿತಿಯಲ್ಲಿದ್ದಾಳೆಯೇ ಎಂಬ ಬಗ್ಗೆ ತನ್ನ ಅಭಿಪ್ರಾಯವನ್ನು ಕೇಳಿ ತನ್ನ ಮುಂದೆ ನಿಶಾನೆ-ಪಿ.ಹೆಚ್ ಅರ್ಜಿಯನ್ನು ನೀಡಿದರು, ತಾನು ಅದರಲ್ಲಿ ಆಕೆ ಹೇಳಿಕೆ ಸಲ್ಲಿಸುವ ಸ್ಥಿತಿಯಲ್ಲಿದ್ದಾಳೆಂದು ಬೆಳಗ್ಗೆ 8.45 ರ ಸಮಯಕ್ಕೆ ನಿಶಾನೆ ಪಿ.ಹೆಚ್./ 1 ಹಿಂಬರಹದ ಮೂಲಕ, ಅಭಿಪ್ರಾಯ ಬರೆದೆ. ಆನಂತರ ನಿಶಾನೆ ಪಿ.ಹೆಚ್/ 2 ಹಿಂಬರಹದ ಮೂಲಕ ರೋಗಿಯನ್ನು ರೋಹಟಕ್ನ ಪಿ.ಜಿ.ಐ.ಎಂ.ಎಸ್.ಗೆ ಕರೆದೊಯ್ಯುವಂತೆ ತಿಳಿಸಿದೆ.ತಾನು ನಿಶಾನೆ ಪಿ.ಎಫ್. ಅನ್ನು ಅದಕ್ಕೆ ಯಾವುದೇ ಸೇರ್ಪಡೆ ಮಾಡದಂತೆ ಮತ್ತು ತನ್ನ ಮುಂದೆ ಆಕೆ ಏನು ಹೇಳಿದಳೋ ಅದೇ ಆಧಾರವಾಗಿಟ್ಟುಕೊಂಡು, ಕರಾರುವಾಕ್ಕಾಗಿ ಮೃತ ಮೀನಾದೇವಿಯ ಹೇಳಿಕೆಯನ್ನು ದಾಖಲಿಸಿದೆನೆಂದು ಅವರು ಹೇಳಿದ್ದಾರೆ.

13. ಪ್ರತಿವಾದಿ ಕಡೆಯಿಂದ ಡಾ:ರಾಜೇಂದರ್ ರಾಯ್ (ಪಿ.ಡಬ್ಲ್ಯೂ .4) ಅವರು ಸ್ವ-ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿದ್ದಾರೆ ಎಂಬುದನ್ನು ರುಜುವಾತುಪಡಿಸುವ ವ್ಯರ್ಥ ಪ್ರಯತ್ನ ಮಾಡಲಾಯಿತು.ಅದಕ್ಕಾಗಿ ಮೃತಳ ಚಿಕ್ಕಪ್ಪ ಮತ್ತು ಆತನ ಹೆಂಡತಿಯು ಅದೇ ಆಸ್ಪತ್ರೆಗೆ ನಿಯೋಜನೆಯಾಗಿದ್ದಾರೆ, ಹಾಗಾಗಿ ಅವರು ಸಾಕ್ಷಿದಾರರ ಮೇಲೆ ಅನುಚಿತವಾದ ಪ್ರಭಾವವನ್ನು ಬೀರಿದ್ದಾರೆಂದು ವಾದಿಸಲಾಯಿತು.ಆದರೆ 14.4.2005 ರಂದು ಬೆಳಗ್ಗೆ 7.30 ರ ಸಮಯಕ್ಕೆ ಮೃತಳನ್ನು ೧ ವೈದ್ಯ-ಕಾನೂನು ಪರೀಕ್ಷೆಗೊಳಪಡಿಸಿದ ಸಮಯದಲ್ಲಿ

ಭಿವಾನಿಯ ಸರ್ಕಾರೀ ಆಸ್ಪತ್ರೆಯಲ್ಲಿ ಆಪಾದಿಸಲಾದ ಮೃತಳ ಚಿಕ್ಕಪ್ಪ ಮತ್ತು ಆತನ ಹೆಂಡತಿ ನಿಯೋಜನೆಯಾಗಿದ್ದಾರೆಂಬುದಕ್ಕೆ ಕಡತದಲ್ಲಿ ಯಾವುದೇ ಸಾಕ್ಷ್ಯವಿಲ್ಲದಿರುವುದರಿಂದ ಎರಡೂ ನ್ಯಾಯಾಲಯಗಳು ಅದನ್ನು ನಂಬಲಿಲ್ಲ.ಅದಕ್ಕೆ ಪ್ರತಿಯಾಗಿ, ಮೇಲೆ ಹೇಳಿದ ಮೃತಳ ಚಿಕ್ಕಪ್ಪ ಮತ್ತು ಆತನ ಪತ್ನಿಯು, ಭಿವಾನಿಯಿಂದ ಸುಮಾರು 70 ಕಿ.ಮೀ. ದೂರದಲ್ಲಿ ಇರುವ ಶಿವಾನಿಯಲ್ಲಿ ಯಾವುದೋ ಖಾಸಗಿ ನರ್ಸಿಂಗ್ ಹೋಂನಲ್ಲಿ ನಿಯೋಜನೆಯಾಗಿದ್ದಾರೆಂದು ಸಾಕ್ಷ್ಯವನ್ನು ದಾಖಲಿಸಲಾಯಿತು.

14. ಡಾ:ರಾಜೇಂದರ್ ರಾಯ್ (ಪಿ.ಡಬ್ಲ್ಯೂ .4) ಯಾರೊಬ್ಬರ ಪ್ರಭಾವಕ್ಕೂ ಒಳಗಾಗಿಲ್ಲ ಎಂಬುದನ್ನು ರುಜುವಾತುಪಡಿಸುವ ಮತ್ತೊಂದು ಸ್ಪಷ್ಟವಾದ ಸಂಗತಿಯು ಪ್ರಸ್ತುತ ಮೊಕದ್ದಮೆಯಲ್ಲಿದೆ, ಅದೇನೆಂದರೆ, ಅವರು ಹಾಗೆ ಪ್ರಭಾವಕ್ಕೊಳಗಾಗಿದ್ದಿದ್ದರೆ, ಅವರಾಗಲೀ ಅಥವಾ ತನಿಖಾಧಿಕಾರಿ ಥರ್ ಮಾಲ್ (ಪಿ.ಡಬ್ಲ್ಯೂ .11) ಆಗಲಿ ಮೃತಳ ಹೇಳಿಕೆಯನ್ನು ದಾಖಲಿಸುವುದಕ್ಕಾಗಿ ಮ್ಯಾಜಿಸ್ಟ್ರೇಟರನ್ನು ಕರೆಯುವ ಯಾವುದೇ ಪ್ರಯತ್ನ ಮಾಡುತ್ತಿರಲಿಲ್ಲ.ಒಬ್ಬ ವ್ಯಕ್ತಿಯು ದೈಹಿಕವಾಗಿ ಅಂಥ ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿದ್ದು, ಹೇಳಿಕೆಯನ್ನು ಸ್ವಯಿಚ್ಛೆಯಿಂದ ಮತ್ತು ಸತ್ಯವಾಗಿ ನೀಡಿದ್ದರೆ, ಅಂಥ ಒಂದು ಹೇಳಿಕೆಯನ್ನು ಆಧಾರವಾಗಿಟ್ಟುಕೊಳ್ಳುವುದಕ್ಕೆ ಯಾವುದೇ ಅಡ್ಡಿಯಿಲ್ಲವೆಂಬುದು ಕಾನೂನಿನಲ್ಲಿ ಸುಸ್ಥಾಪಿತವಾದ ಅಂಶವಾಗಿದೆ.ಕನಕಸಿಂಗ್ ರಾಯ್ಸಿಂಗ್ ರಾವ್ -ವಿರುದ್ಧ ಗುಜರಾತ್ ರಾಜ್ಯ ಸರ್ಕಾರ, (2003) 1 ಎಸ್ಸಿಸಿ 73:2003 ಎಸ್ಸಿ (ಕ್ರಿ.) 153 ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅಂಥ ಅಭಿಪ್ರಾಯವನ್ನು ತೆಗೆದುಕೊಂಡಿದ್ದು, ಅದು ಈ ಕೆಳಕಂಡಂತಿದೆ:

"5. ಆ ನಂತರದ ಪ್ರಶ್ನೆಯೇನೆಂದರೆ, ಈ ಮೊಕದ್ದಮೆಯಲ್ಲಿ ಮೃತರ ಮರಣ ಹೇಳಿಕೆಯನ್ನು ಪ್ರಾಥಮಿಕವಾಗಿ ಆಧರಿಸಿ ಅಪರಾಧ ನಿರ್ಣಯ ಮಾಡಬಹುದೇ?ಎಂಬುದಾಗಿದೆ.ಈ ಸಂಬಂಧ ಮಾನ್ಯ ನ್ಯಾಯವಾದಿಯು ಉಲ್ಲೇಖಿಸಿದ, ಈ ಮೇಲೆ ಗಮನಿಸಲಾದ ಮೊಕದ್ದಮೆಗಳನ್ನು ನಾವು ಚರ್ಚಿಸುವುದು ಅಗತ್ಯವಿಲ್ಲವೆಂದು ನಮಗನ್ನಿಸುತ್ತದೆ.ಯಾಕೆಂದರೆ ಈ ಸಂಬಂಧದಲ್ಲಿ ಕಾನೂನು ಈಗಾಗಲೇ ಸುಸ್ಥಾಪಿತವಾದದ್ದೆಂದು ನಮ್ಮ ಅಭಿಪ್ರಾಯವಾಗಿದೆ.ಅದೇನೆಂದರೆ, ಅಂಥ ಹೇಳಿಕೆಯನ್ನು ನೀಡಲು ದೈಹಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ವ್ಯಕ್ತಿಯು ಸ್ವಯಿಚ್ಛೆಯಿಂದ ಮತ್ತು ನಿಜವಾಗಿ ಆ ಹೇಳಿಕೆಯನ್ನು ನೀಡಿದ್ದರೆ, ಆಗ ಅಂಥ ಹೇಳಿಕೆಯನ್ನು ಆಧಾರವಾಗಿಟ್ಟು ಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ.ಪ್ರಸ್ತುತ ಮೊಕದ್ದಮೆಯಲ್ಲಿ ಪಿ.ಡಬ್ಲ್ಯೂ, ವೈದ್ಯರ ಸಾಕ್ಷ್ಯವು ಮೃತಳು ಪ್ರಜ್ಞಾವಸ್ಥೆಯಲ್ಲಿದ್ದಳು ಹಾಗೂ ಹೇಳಿಕೆಯನ್ನು ನೀಡಲು ವೈದ್ಯಕೀಯವಾಗಿ ಉತ್ತಮ ಸ್ಥಿತಿಯಲ್ಲಿದ್ದಳು ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ತೋರಿಸುತ್ತದೆ.ಆ ಸಮಯದಲ್ಲಿ ನ್ಯಾಯಿಕ ಮ್ಯಾಜಿಸ್ಟ್ರೇಟ್ ಲಭ್ಯವಿರದ ಕಾರಣದಿಂದ ಹೇಳಿಕೆಯನ್ನು ದಾಖಲಿಸಿಕೊಳ್ಳಲು ಅವರನ್ನೇ ಕೋರಿದ್ದರಿಂದ ಅವರು ಹಾಗೆ ಮಾಡಿದ್ದಾರೆ.ಹೇಳಿಕೆಯನ್ನು ನೀಡಲು ಮೃತಳ ಮಾನಸಿಕ ಸ್ಥಿತಿ ಹಾಗೂ ದೈಹಿಕ ಸ್ಥಿತಿಗೆ ಸಂಬಂಧಿಸಿದಂತೆ ಅವರ ಸಾಕ್ಷ್ಯವನ್ನು ಪಾಟೀಸವಾಲಿನಲ್ಲಿ ಪ್ರಶ್ನಿಸಿರುವುದಿಲ್ಲ.ಹಾಗಾಗಿ, ಅಧೀನ ನ್ಯಾಯಾಲಯಗಳು ಅಭಿಪ್ರಾಯಪಟ್ಟಿರುವಂತೆ, ಮೃತಳು ಮಾನಸಿಕವಾಗಿ ಹೇಳಿಕೆ ನೀಡುವ ಸ್ಥಿತಿಯಲ್ಲಿದ್ದಳೆಂದು ನಿರ್ಣಯಿಸಬೇಕಾಗುತ್ತದೆ.ನಮ್ಮ ಪರಿಗಣನೆಗೆ ಇರುವ ಮತ್ತೊಂದು ಪ್ರಶ್ನೆಯೆಂದರೆ, ಈ ಹೇಳಿಕೆಯು ಸ್ವಯಿಚ್ಛೆಯಿಂದ ಕೂಡಿದ್ದೇ ಮತ್ತು ಸತ್ಯವಾದ್ದೇ ಎಂಬುದು.ಆಕೆ ಹೇಳಿಕೆ ನೀಡುವಾಗ ಅಸತ್ಯವಾದ ಅಥವಾ ಸುಳ್ಳಾದ ಹೇಳಿಕೆ ನೀಡುವಂತೆ ಆಕೆಯನ್ನು ಪ್ರೇರೇಪಿಸಬಹುದಾದ ಆಕೆಯ ನಿಕಟ ಸಂಬಂಧಿಗಳಲ್ಲಿ ಯಾರಾದರೂ ಆಕೆಯನ್ನು ಸುತ್ತುವರಿದಿದ್ದರೇ ಎಂಬುದು ಪ್ರತಿವಾದಿಯ ಕಡೆಯ ವಾದವಾಗಿರುವುದಿಲ್ಲ.ಅದಿಲ್ಲದಿರುವಲ್ಲಿ ಹೇಳಿಕೆಯು ಸ್ವಯಿಚ್ಛೆಯದಾಗಿರುವುದಕ್ಕೆ ಸಂಬಂಧಪಡುವಷ್ಟರ

ಮಟ್ಟಿಗೆ ಮೃತಳು ಬಾಹ್ಯಪ್ರಭಾವ ಅಥವಾ ಒತ್ತಡದಿಂದ ಮುಕ್ತಳಾಗಿರುವ ಕಾರಣದಿಂದ, ಅದರಲ್ಲಿ ಯಾವ ಸಂದೇಹವೂ ಇರಲಾರದು.ಹೇಳಿಕೆಯ ಸತ್ಯತೆಗೆ ಸಂಬಂಧಪಡುವಷ್ಟರ ಮಟ್ಟಿಗೆ, ಮೇಲೆ ತಿಳಿಸಿದಂತೆ ಆಕೆಯು ಸದರಿ ಹೇಳಿಕೆಯನ್ನು ನೀಡಿದ್ದಾಳೆಂದು ವೈದ್ಯರು (ಪಿ.ಡಬ್ಲ್ಯೂ .5) ಹೇಳಿರುವುದನ್ನು ಪಾರ್ಟೀ ಸವಾಲಿನಲ್ಲಿ ಪ್ರಶ್ನಿಸಿರುವುದಿಲ್ಲ.ಮೃತಳ ಸಂಕ್ಷಿಪ್ತ ಹೇಳಿಕೆಯನ್ನು ಸ್ಪಷ್ಟವಾಗಿ ಹೇಳುವುದಾದರೆ, ಆಕೆ ಮತ್ತು ಆಪಾದಿತನ ನಡುವಿನ ಜಗಳದ ಕಾರಣದಿಂದ ಆಪಾದಿತನು ಆಕೆಯ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿದನು ಎಂಬ ಬಗ್ಗೆ ನಮ್ಮ ಅಭಿಪ್ರಾಯದಲ್ಲಿ ಯಾವುದೇ ಸಂದೇಹವೂ ಇಲ್ಲ. "

15. ಅಶೋಕ್ ಕುಮಾರ್ ವಿರುದ್ಧ-ರಾಜಾಸ್ಥಾನ ರಾಜ್ಯ ಸರ್ಕಾರ (1991) 1 ಎಸ್ಸಿಸಿ 166: 1991 ಎಸ್ಸಿ (ಕ್ರಿ.) 126 ಮೊಕದ್ದಮೆಯಲ್ಲಿ, ಅದು ಬೆಂಕಿಯಲ್ಲಿ ಸುಟ್ಟ ಸಾವಿನ ಪ್ರಕರಣವಾಗಿದ್ದರೆ, ಚಿಕಿತ್ಸಾ ಟಿಪ್ಪಣಿಯಲ್ಲಿ ಮಾಡಿದ ಗಾಯದ ವರದಿಯ ನಮೂದುಗಳನ್ನು ಮರಣ ಕಾಲದ ಹೇಳಿಕೆಯೆಂದೇ ಅರ್ಥೈಸಿಕೊಳ್ಳಬಹುದು ಎಂಬುದನ್ನು ಈ ನ್ಯಾಯಾಲಯವು ಗಮನಿಸಿದೆ.ಸದರಿ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಅಭಿಪ್ರಾಯವು ಈ ಕೆಳಕ ಂ ಡ ಂ ತಿದೆ:

"11. ಎರಡು ಅಧೀನ ನ್ಯಾಯಾಲಯಗಳು ಮರಣ ಕಾಲದ ಹೇಳಿಕೆಯೆಂದು ಅರ್ಥೈಸಲಾದ ಗಾಯ ಚಿಕಿತ್ಸೆಯ ವರದಿಯಲ್ಲಿನ ನಮೂದುಗಳ ಕುರಿತಾಗಿ ತೀವ್ರ ಟೀಕೆಯನ್ನು ಮಾಡಲಾಗಿತ್ತು ಮತ್ತು ಮರಣ ಕಾಲದ ಹೇಳಿಕೆಯು ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಾದರೂ ಮತ್ತು ಯಾವುದೇ ಸಮರ್ಥನೆಯಿಲ್ಲದೆ ಅದರ ಮೇಲೆ ಅಪರಾಧ ನಿರ್ಣಯವನ್ನು ದಾಖಲಿಸಬಹುದಾದರೂ ಅದನ್ನು ಯಾವ ಸಂದರ್ಭಗಳಲ್ಲಿ ದಾಖಲಿಸಲಾಯಿತೋ ಆ ಸಂದರ್ಭಗಳು ಅದು ಪ್ರಮಾಣಿಕವಾದುದಕ್ಕಾಗಿದ್ದರೂ ಸಂದೇಹವನ್ನು ಸೃಷ್ಟಿಸುತ್ತವೆಂದು ವಾದಿಸಲಾಗಿತ್ತು.ಉಚ್ಚನ್ಯಾಯಾಲಯವು ತನ್ನ ಮುಂದೆ ಮಂಡಿಸಿದ ಆ ರೀತಿಯ ವಾದಗಳನ್ನು ಸಕಾರಣಗಳಿಗಾಗಿ ನಿರಾಕರಿಸಿತು.ಅದರಲ್ಲಿ ಯಾವುದೇ ರೀತಿಯ ಹುರುಳಿರುವುದು ನಮಗೂ ಸಹ ಕಂಡುಬರುತ್ತಿಲ್ಲ.ಡಾ:ತೇಮಣಿ ಮೃತಳನ್ನು ಪರೀಕ್ಷಿಸಿದಾಗ ಅವಳ ಸ್ಥಿತಿ ಗಂಭೀರವಾಗಿರುವುದನ್ನು ಮನಗಂಡು, ಕೂಡಲೇ ಪೊಲೀಸ್ ಠಾಣೆಗೆ ಸಂದೇಶವನ್ನು ರವಾನಿಸಿ, ಮರಣಕಾಲದ ಹೇಳಿಕೆಯನ್ನು ದಾಖಲಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡುವಂತೆ ಕೋರಿದರು.ಇದು ಪೊಲೀಸ್ ಠಾಣೆಯ ದಾಖಲೆಯಲ್ಲಿನ ನಮೂದಿನಿಂದ ಸಾಬೀತಾಗುತ್ತದೆ.ಆದರೆ, ರೋಗಿಯ ಮರಣ ಯಾತನೆಯನ್ನು ಕಡಿಮೆ ಮಾಡುವುದಕ್ಕೆ ಮಾರ್ಫಿನ್ ಇಂಜೆಕ್ಷನ್ ನೀಡಿ, ಆನಂತರ ಆಕೆ ಪ್ರಜ್ಞಾಹೀನ ಸ್ಥಿತಿಗೆ ತಲುಪಿದ ಸಮಯ 11.00 ಗಂಟೆಯ ನಂತರ ಪೊಲೀಸ್ ಇನ್ಸ್ ಪೆಕ್ಟರ್ ಬಂದರು.  ಆದರೆ 10.00 ರಿಂದ 11.00 ಗಂಟೆಯ ನಡುವೆ ಅರೆ ಪ್ರಜ್ಞಾವಸ್ಥೆಯಲ್ಲಿದ್ದಾಗ ತಿಳಿಸಿದಂತೆ ಡಾ:ಸನಾ ಚಿಕಿತ್ಸಾ ವರದಿಯನ್ನು ಬರೆದು, ಆ ನಮೂದುಗಳನ್ನು ಗಾಯ ಚಿಕಿತ್ಸಾ ವರದಿಯಲ್ಲಿ ದಾಖಲಿಸಿದ್ದರು.ಮೃತಳು ತನ್ನ ಗಂಡನ ಸಹೋದರನ ವರ್ತನೆ ಬಗ್ಗೆ ದೂರಿದಳೆಂದು ಚಿಕಿತ್ಸಾ ವರದಿಯಲ್ಲಿ ದಾಖಲಿಸಿರುವುದರಲ್ಲಿ ನ್ಯಾಯಾಧೀಶರಿಗೆ ಯಾವ ಸಂದೇಹವೂ ಇರಲಿಲ್ಲ.ಮಾನ್ಯ ನ್ಯಾಯವಾದಿಯೂ ಕೂಡ, ಕೇವಲ ಗಂಡನ ಸಹೋದರ ಎಂಬ ಪದ ಮಾತ್ರದಿಂದಲೇ ಅದು ಮೇಲ್ಮನವಿದಾರನಿಗೆ ಸಂಬಂಧಿಸಿದ್ದು ಎಂಬುದನ್ನು ಸಾಬೀತುಪಡಿಸುವಂತಿಲ್ಲವೆಂದು ವಾದಿಸಿದ್ದನ್ನು ಹೊರತುಪಡಿಸಿ, ಎಂದರೆ, ಸಂದೇಹಾಸ್ಪದ ವಿಷಯವಾಗಿ ರೂಪಿಸುವ ಪ್ರಯತ್ನವನ್ನು ಹೊರತುಪಡಿಸಿ, ಅದನ್ನು ಬಿಟ್ಟುಬಿಡುವುದಕ್ಕೆ ಯಾವುದೇ ದುರ್ಬಲತೆಯನ್ನು ಅಥವಾ ಕಾರಣವನ್ನು ಎತ್ತಿ ತೋರಿಸಲಿಲ್ಲ.ಆ ನಮೂದು ಒಂದೇ ಆಧಾರವಾಗಿದ್ದರೆ ಅದೂ ಸಾಧ್ಯವಿರಬಹುದಿತ್ತು.ಆದರೆ, ಅದು ಈ ಕೃತ್ಯಕ್ಕೆ ಹೊಣೆಗಾರನಾದವನು ಗಂಡನ ಸಹೋದರನೆಂದು ಪುಷ್ಠೀಕರಿಸುವುದಲ್ಲದೆ ಗಾಯ ಚಿಕಿತ್ಸಾ ವರದಿಯಲ್ಲಿನ ನಮೂದು ಮೂಲಕ ಮೇಲ್ಮನವಿದಾರನ ಗುರುತನ್ನು

ಸ್ಪಷ್ಟಪಡಿಸುತ್ತದೆ.ಗಾಯ ಚಿಕಿತ್ಸಾ ವರದಿಯನ್ನು ನಾವು ಪರೀಕ್ಷಿಸಿದ್ದು, ಅದರ ವಿಶ್ವಾಸಾರ್ಹತೆಯನ್ನು ಸ ಂ ದೇಹಪಡಲು ನಮಗೆ ಯಾವುದೇ ಕಾರಣವು ಕಂಡುಬರಲಿಲ್ಲ."

16. ಪ್ರಸ್ತುತ ಮೊಕದ್ದಮೆಯಲ್ಲಿ ನಮಗೆ ಕಂಡುಬರುವುದೇನೆಂದರೆ, ಡಾ:ರಾಜೇಂದ್ರ ರಾಯ್ (ಪಿ.ಡಬ್ಲ್ಯೂ .4) ದಾಖಲಿಸಿದ್ದ ಮರಣ ಕಾಲದ ಹೇಳಿಕೆಗೆ ಮನೋಜ್ (ಮೇಲ್ಮನವಿದಾರ -1) ಕೂಡ ಸಹಿ ಮಾಡಿದ್ದಾನೆ, ಅದು ಹೇಳಿಕೆಯನ್ನು ದಾಖಲಿಸಿಕೊಳ್ಳುವಾಗ ಮೇಲ್ಮನವಿದಾರ -1 ಹಾಜರಿದ್ದ ಎಂಬುದನ್ನು ಸೂಚಿಸುತ್ತದೆ.ಡಾ:ರಾಜೇಂದ್ರ ರಾಯ್ (ಪಿ.ಡಬ್ಲ್ಯೂ -4) ಮೇಲೆ ಪ್ರಭಾವವನ್ನು ಬೀರುವುದಕ್ಕೆ ಮೃತಳ ಸಂಬಂಧಿಕರು ಅಲ್ಲಿ ಹಾಜರಿದ್ದರು ಎಂಬುದನ್ನು ಸೂಚಿಸುವುದಕ್ಕೆ ದಾಖಲೆಯಲ್ಲಿ ಯಾವುದು ಏನೂ ಇಲ್ಲ.

17. ಹಾಗಾಗಿ, ಉಚ್ಚ ನ್ಯಾಯಾಲಯವು ಈಗಾಗಲೇ ಎತ್ತಿ ಹಿಡಿದಿರುವಂತೆ, ಸೆಷನ್ಸ್ ನ್ಯಾಯಾಲಯದ ನಿರ್ಣಯದಲ್ಲಿ ಯಾವುದೇ ದುರ್ಬಲತೆಯು ನಮಗೆ ಕಂಡುಬರುತ್ತಿಲ್ಲ.

18. ಈಗಾಗಲೇ ಒಪ್ಪಿಕೊಳ್ಳಲಾದಂತೆ, ಮೀನಾದೇವಿ (ಮೃತಳು) ಸುಟ್ಟಗಾಯದ ಕಾರಣದಿಂದ ಎಂದರೆ ಆಕೆಯು ವಿವಾಹವಾದ ಏಳು ವರ್ಷಗಳೊಳಗೆ ಸಹಜ ಪರಿಸ್ಥಿತಿಗಳಿಗಿಂತ ಭಿನ್ನವಾಗಿ ಮೃತಪಟ್ಟಿದ್ದಾಳೆ.ಫಿರ್ಯಾದುದಾರ (ಪಿ.ಡಬ್ಲ್ಯೂ .9) ಮೃತಳ ತಂದೆ ವಿವಾಹದ ಸಂದರ್ಭದಲ್ಲಿ ತಾನು ಡಬಲ್ ಬೆಡ್, ಸೋಫಾ ಸೆಟ್, ಟಿ.ವಿ., ಕೂಲರ್, ಮತ್ತು ಇತರ ಗೃಹೋಪಯೋಗಿ ವಸ್ತುಗಳನ್ನು, ಜೊತೆಗೆ 4 ತೊಲೆ ಬಂಗಾರದ ಒಡವೆಗಳು, 21 ಬಗೆಯ ಪಾತ್ರೆ ಸಾಮಾನುಗಳು ಮತ್ತು 2100/- ರೂ.ಗಳ ನಗದನ್ನು ನೀಡಿದ್ದೇನೆಂದು ಹೇಳಿದ್ದಾನೆ.ಆದರೆ ತನ್ನ ಮಗಳು, ತನ್ನ ಗಂಡನ ಮನೆಯವರಿಗೆ ಆ ವಸ್ತುಗಳು ತೃಪ್ತಿ ತಂದಿಲ್ಲವೆಂದು ತನಗೆ ಹೇಳಿದಳು.ತನ್ನ ಮಗಳು ಎರಡನೇ ಬಾರಿಗೆ ಗಂಡನ ಮನೆಗೆ ಹೋದಾಗ, ಆಪಾದಿತರೆಲ್ಲರೂ ಆಕೆಯನ್ನು ಹಂಗಿಸಲು ಪ್ರಾರಂಭಿಸಿದ್ದಾರೆ ಮತ್ತು ಮೋಟಾರ್ ಸೈಕಲ್ಗೆ ಬೇಡಿಕೆಯೊಡ್ಡಿ ಆಕೆಗೆ ಕಿರುಕುಳ ನೀಡಿದ್ದಾರೆ.ಆಕೆಯನ್ನು ತಿರುಗಿ ಗಂಡನ ಮನೆಯಿಂದ ಹೊಡೆದಟ್ಟಿದರು.ತದನಂತರ ಆಕೆ ತನ್ನೊಂದಿಗೆ (ಪಿ.ಡಬ್ಲ್ಯೂ .9) ಹದಿನಾಲ್ಕು ತಿಂಗಳುಗಳ ಕಾಲ ಜೊತೆಗಿದ್ದಳು.ಆನಂತರ ಹೇತಂಪುರದ ಸಂತಮನ್ ಸಿಂಗ್, ಕ್ರಿಷನ್ ಒಳಗೊಂಡ ಪಂಚಾಯತಿಯನ್ನು 9 ಸೇರಿಸಿದೆ ಮತ್ತು ಇತರರು ಎಂದರೆ, ತನ್ನ ಸಹೋದರ ಸತ್ಯವಾನ್ ಮತ್ತು ಖೇರಾ ಗ್ರಾಮದಿಂದ ಬಂದ ತನ್ನ ಸೋದರ ಸಂಬಂಧಿಗಳೂ ಅಲ್ಲಿ ಇದ್ದರು.ಪಂಚಾಯತಿಯಲ್ಲಿ, ಆಪಾದಿತರು ಇನ್ನು ಮುಂದೆ ಮೀನಾಳಿಗೆ ಕಿರುಕುಳ ಕೊಡುವುದಿಲ್ಲವೆಂದು ಭರವಸೆ ನೀಡಿ, ನಂತರ ಮಹಾವೀರ್ ಮತ್ತು ಚಮೇಲಿದೇವಿ ಬಂದು ಆಕೆಯನ್ನು ಕರೆದುಕೊಂಡು ಹೋದರು.ಆಕೆ ಸಾಯುವುದಕ್ಕಿಂತ ಸುಮಾರು ಹತ್ತು ತಿಂಗಳ ಮುಂಚೆ ಆಕೆಯನ್ನು ಆ ರೀತಿಯಲ್ಲಿ ಗಂಡನ ಮನೆಗೆ ಕಳುಹಿಸಕೊಡಲಾಯಿತು.ಅದಾದ ನಾಲ್ಕು ದಿನಗಳ ನಂತರ ಮತ್ತೆ ಆಕೆಗೆ ಮೋಟಾರ್ ಸೈಕಲ್ ತೆಗೆಸಿಕೊಂಡು ಬರುವಂತೆ ಕಿರುಕುಳ ಕೊಡಲು ಪ್ರಾರಂಭಿಸಿದರು ಮತ್ತು ಆಕೆಯನ್ನು ಹೊಡೆಯುವುದು ಮುಂದುವರಿಯಿತು ಎಂದು ಆತನು ಹೇಳಿಕೆ ನೀಡಿದ್ದಾನೆ.ಆತನ ಸಹೋದರ ಸತ್ಪಾಲ್ (ಪಿ.ಡಬ್ಲ್ಯೂ .10) ಕೂಡ ಆತನ ಸಾಕ್ಷ್ಯವನ್ನು ಸಮರ್ಥಿಸಿದ್ದಾನೆ.ಅವರ ಹೇಳಿಕೆಗಳನ್ನು ನಂಬದಿರಲು ಕಾರಣವಾಗುವ ಪರಿಸ್ಥಿತಿಗಳು ದಾಖಲೆಯಲ್ಲಿ ಕಂಡುಬರುವುದಿಲ್ಲ.

19. ದಾಖಲೆಯಲ್ಲಿರುವ ಅಂಥ ಸಾಕ್ಷಿಯ ಹಿನ್ನೆಲೆಯಲ್ಲಿ ಉಭಯ ನ್ಯಾಯಾಲಯಗಳು, ಆಕೆಯು ಸಾಯುವ ಮುನ್ನ ವರದಕ್ಷಿಣೆಗಾಗಿ ಒತ್ತಾಯಿಸಿ ಆಕೆಯ ಗಂಡ ಹಾಗೂ ಆತನ ಸಂಬಂಧಿಕರು ಆ ಸಂಬಂಧವಾಗಿ ಆಕೆಗೆ ಕಿರುಕುಳ ನೀಡಿ, ಆಕೆಯ ಮೇಲೆ ಕ್ರೂರವಾಗಿ ವರ್ತಿಸಿದ್ದಾರೆಂದು ಖಡಾಖಂಡಿತವಾದ ನಿರ್ಣಯಕ್ಕೆ ಬಂದಿದೆ.ಆದ್ದರಿಂದ, ಐ.ಪಿ.ಸಿ. 304-ಬಿ ಸೆಕ್ಷನ್ ಅಡಿಯಲ್ಲಿ ಮೇಲ್ಮನವಿದಾರರ ಅಪರಾಧ ನಿರ್ಣಯ

ಮಾಡುವುದಕ್ಕೆ ಎಲ್ಲಾ ಅಂಶಗಳೂ ಇವೆ. ಮೇಲ್ಮನವಿದಾರರು ಐ.ಪಿ.ಸಿ. 498- ಎ ಸೆಕ್ಷನ್ ಅಡಿಯಲ್ಲಿನ ಅಪರಾಧದ ತಪ್ಪಿತಸ್ಥರೆಂದು ಪ್ರಾಸಿಕ್ಯೂಷನ್ ಸಂದೇಹಾತೀತವಾಗಿ ರುಜುವಾತುಪಡಿಸಿದೆ.

20. ಈ ಸಂದರ್ಭಗಳ ಹಿನ್ನೆಲೆಯಲ್ಲಿ ಸೆಷನ್ಸ್ ನ್ಯಾಯಾಲಯವು, ಐ.ಪಿ.ಸಿ. 304-ಬಿ ಮತ್ತು 498- ಎ ಸೆಕ್ಷನ್ನಳ ಅಡಿಯಲ್ಲಿನ ಅಪರಾಧಗಳಿಗಾಗಿ ಮೇಲ್ಮನವಿದಾರರನ್ನು ಅಪರಾಧ ನಿರ್ಣಯಗೊಳಿಸುವುದಕ್ಕಾಗಿ ಸಮಂಜಸವಾದ ಹಾಗೂ ಸಮರ್ಥನೀಯವಾದ ಕಾರಣಗಳನ್ನು ದಾಖಲಿಸಿದೆಯೆಂಬುದು ನಮ್ಮ ಅಭಿಪ್ರಾಯವಾಗಿದೆ.

21. ಸರ್ಕಾರದ ಪರ ನ್ಯಾಯವಾದಿಯು ಸೂಚಿಸಿದಂತೆ, ಐ.ಪಿ.ಸಿ. 302 ನೇ ಸೆಕ್ಷನ್ ಅಡಿಯಲ್ಲಿ ಮೇಲ್ಮನವಿದಾರರನ್ನು ಅಪರಾಧ ನಿರ್ಣಯಗೊಳಿಸುವ ಮಟ್ಟಿಗೆ, ಅಪರಾಧ ನಿರ್ಣಯವನ್ನು ಐ.ಪಿ.ಸಿ. 302 ನೇ ಸೆಕ್ಷನ್ಗೆ ಪರಿವರ್ತನೆಗೊಳಿಸುವ ಸಂಬಂಧ ನಮಗೆ ಯಾವುದೇ ತಪ್ಪು ಕಂಡುಬರುತ್ತಿಲ್ಲ.

22. ಮುತ್ತುಕುಟ್ಟಿ ವಿರುದ್ಧ ಸರ್ಕಾರ (2005) 9 ಎಸ್ಸಿಸಿ 113:2005 ಎಸ್.ಸಿ.ಸಿ. (ಕ್ರಿ.) 1202, ಮೊಕದ್ದಮೆಯಲ್ಲಿ, ಆಪಾದಿತರು ಆಕೆಗೆ ಬೆಂಕಿ ಹಚ್ಚಿ ಆಕೆಯು ಮರಣ ಹೊಂದುವುದಕ್ಕೆ ಕಾರಣವಾದಾಗ, 304-ಬಿ ಸೆಕ್ಷನ್ಗೆ ಬದಲಾಗಿ 302 ನೇ ಪ್ರಕರಣವು ಅನ್ವಯವಾಗುತ್ತದೆಂದು, ( ಆ ಮೊಕದ್ದಮೆಯ) ಸತ್ಯ ಸಂಗತಿಗಳ ಮೇಲೆ, ಸದರಿ ಮೊಕದ್ದಮೆಯ ಮೇಲ್ಮನವಿದಾರ-ಆಪಾದಿತನನ್ನು ಮೂಲತಃ ಐ.ಪಿ.ಸಿ. 304-ಬಿ ಸೆಕ್ಷನ್ನೊಂದಿಗೆ 302 ನೇ ಸೆಕ್ಷನ್ ಅಡಿಯಲ್ಲಿ ದಂಡನೀಯವಾದ ಅಪರಾಧಕ್ಕಾಗಿ ಆರೋಪ ಹೊರಿಸಿದ್ದು, ಅಧಿವಿಚಾರಣಾ ನ್ಯಾಯಾಲಯವು ತೆಗೆದುಕೊಂಡ ನಿರ್ಣಯದ ಆಧಾರದಲ್ಲಿ ಅಪರಾಧ ನಿರ್ಣಯವನ್ನು 304 ನೇ ಸೆಕ್ಷನ್ ಭಾಗ-II ಕ್ಕೆ ಬದಲಾಯಿಸಿದರೆ ಆ ಅಪೀಲುದಾರ ಆಪಾದಿತರಿಗೆ ಯಾವುದೇ ಪ್ರತಿಕೂಲ ಪರಿಣಾಮ ಬೀರುವುದಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

23. ಪ್ರಸ್ತುತ ಮೊಕದ್ದಮೆಯಲ್ಲಿ, ಮಾನ್ಯ ಏಕಸದಸ್ಯ ಪೀಠವು, ಸಾಕ್ಷಿಯನ್ನು ಮೌಲ್ಯಮಾಪನ ಮಾಡಿದ ನಂತರ, ಐ.ಪಿ.ಸಿ. 34 ನೇ ಸೆಕ್ಷನ್ನೊಂದಿಗೆ ಓದಿಕೊಂಡಂತೆ 302 ಮತ್ತು 406 ನೇ ಸೆಕ್ಷನ್ನಳ ಅಡಿಯಲ್ಲಿನ ಅಪರಾಧಗಳಿಗಾಗಿ ಎಲ್ಲಾ ನಾಲ್ಕು ಆಪಾದಿತರ ವಿರುದ್ಧದ ತನ್ನ ವಾದವನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್ ತೀವ್ರ ವಿಫಲತೆಯನ್ನು ಕಂಡಿದೆಯೆಂದು ದಿನಾಂಕ 4.9.2006 ರ ತನ್ನ ತೀರ್ಪಿನಲ್ಲಿ ನಿರ್ದಿಷ್ಟವಾಗಿ ಅಭಿಪ್ರಾಯಪಟ್ಟಿದ್ದು, ಆ ಕಾರಣದಿಂದ ಸದರಿ ಅಪರಾಧದ ಅಡಿಯಲ್ಲಿ ಎಲ್ಲಾ ನಾಲ್ಕು ಆಪಾದಿತರನ್ನು ಖುಲಾಸೆಗೊಳಿಸಿದೆ.ಮಹಾವೀರ್ ಸಿಂಗ್ ಖುಲಾಸೆಯ ವಿರುದ್ಧ ಫಿಯಾದುದಾರನು (ಪಿ.ಡಬ್ಲ್ಯೂ .9) ಮೇಲ್ಮನವಿ ಸಲ್ಲಿಸಿದ್ದನಾದರೂ ಅದನ್ನು ಪ್ರಶ್ನಿತ ಆದೇಶವು ವಜಾಗೊಳಿಸಿತು.ಐ.ಪಿ.ಸಿ. 34 ನೇ ಸೆಕ್ಷನ್ನೊಂದಿಗೆ ಓದಿಕೊಂಡಂತೆ 302 ಮತ್ತು 406 ನೇ ಸೆಕ್ಷನ್ನಳ ಅಡಿಯಲ್ಲಿನ ಅಪರಾಧಗಳಿಗಾಗಿ ಎಲ್ಲಾ ನಾಲ್ಕು ಆಪಾದಿತರನ್ನು ಖುಲಾಸೆಗೊಳಿಸಿದ ವಿರುದ್ಧ ಫಿರ್ಯಾದುದಾರನಾಗಲಿ ಅಥವಾ ಸರ್ಕಾರವಾಗಲೀ ಮೇಲ್ಮನವಿ ಸಲ್ಲಿಸಲಿಲ್ಲ.ಹಾಗಾಗಿ ಏಕಸದಸ್ಯಪೀಠದ ನಿರ್ಣಯವು ಅಂತಿಮತೆಯನ್ನು ಮುಟ್ಟಿದ್ದು, 304-ಬಿ ಸೆಕ್ಷನ್ ಅಡಿಯಲ್ಲಿನ ಪ್ರಸ್ತುತ ಶಿಕ್ಷೆಯನ್ನು 302 ನೇ ಸೆಕ್ಷನ್ಗೆ ಬದಲಾಯಿಸುವ ಪ್ರಶ್ನೆಯೇ ಈಗ ಉದ್ಭವಿಸುವುದಿಲ್ಲ.

24. ಕೊನೆಯದಾಗಿ, ಮೊಕದ್ದಮೆಯ ಸಂಗತಿಗಳು ಹಾಗೂ ಸಂದರ್ಭಗಳನ್ನು ಪರಿಗಣಿಸಿ, ಮೇಲ್ಮನವಿದಾರರಿಗೆ ವಿಧಿಸಲಾದ ಶಿಕ್ಷೆಯನ್ನು 10 ವರ್ಷಗಳಿಂದ ಐ.ಪಿ.ಸಿ. 304-ಬಿ ಸೆಕ್ಷನ್ ಅಡಿಯಲ್ಲಿ ನಿಗದಿಪಡಿಸಲಾದ ಕನಿಷ್ಠ ಶಿಕ್ಷೆಯಾದ 7 ವರ್ಷಗಳಿಗೆ ಕಡಿತಗೊಳಿಸುವ ಬಗ್ಗೆ ಪರಿಗಣಿಸುವಂತೆ ಮೇಲ್ಮನವಿದಾರರ ಪರವಾಗಿ

ವಾದಿಸಲಾಗಿತ್ತು.ಪ್ರಸ್ತುತ ಮೊಕದ್ದಮೆಯಲ್ಲಿ ಅಧಿವಿಚಾರಣಾ ನ್ಯಾಯಾಲಯವು ಐ.ಪಿ.ಸಿ. 304-ಬಿ ಸೆಕ್ಷನ್ ಅಡಿಯಲ್ಲಿನ ಅಪರಾಧಗಳಿಗಾಗಿ ಮೇಲ್ಮನವಿದಾರರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದ್ದು, ಅದನ್ನು ಈಗಾಗಲೇ ಉಚ್ಚ ನ್ಯಾಯಾಲಯವು ಮೊಕದ್ದಮೆಯ ಸಂಗತಿಗಳು ಹಾಗೂ ಸಂದರ್ಭಗಳನ್ನು ಚ ಪರಿಗಣಿಸಿ ಜೀವಾವಧಿ ಶಿಕ್ಷೆಯನ್ನು 10 ವರ್ಷಗಳಿಗೆ ಇಳಿಸಿದೆಯೆಂಬುದು ನಮಗೆ ಕಂಡುಬರುತ್ತದೆ.

25. ಏಳು ವರ್ಷಗಳ ಕನಿಷ್ಠ ಶಿಕ್ಷೆಗೆ ಅದನ್ನು ಇಳಿಸುವ ಯಾವುದೇ ಇತರ ಸಂದರ್ಭಗಳು ನಮಗೆ ಕಂಡುಬರುತ್ತಿಲ್ಲ.ಗುಣಾರ್ಹತೆ ಇಲ್ಲದಿರುವುದರಿಂದಾಗಿ, ಮೇಲ್ಮನವಿಯನ್ನು ವಜಾಗೊಳಿಸಲಾಗಿದೆ.

26. 2 ಮತ್ತು 3 ನೇ ಮೇಲ್ಮನವಿದಾರರ ಜಾಮೀನು ಮುಚ್ಚಳಿಕೆಗಳನ್ನು ರದ್ದುಪಡಿಸಲಾಗಿದೆ.2 ಮತ್ತು 3 ನೇ ಮೇಲ್ಮನವಿದಾರರನ್ನು ಉಳಿದ ಶಿಕ್ಷೆಯನ್ನು ಅನುಭವಿಸಲು ಅಭಿರಕ್ಷೆಗೆ ತೆಗೆದುಕೊಳ್ಳುವಂತೆ ನಿರ್ದೇಶಿಸಲಾಗಿದೆ.